**ಪಿಡಬ್ಲು-1**

**<u>ಸಾಕ್ಷಿಯನ್ನು ದಿನಾಂಕ 07-12-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ- 8 ರಿಂದ 15 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಂ.ಎಸ್. ಭಟ್ಟರಿಂದಃ</u>**

ದಾವಾ ಸ್ವತ್ತನ್ನು ಮಂಜೂರು ಮಾಡಲು ನಮ್ಮ ತಂದೆಯವರು ಪ್ರತ್ಯೇಕವಾಗಿ ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿಲ್ಲ. ಇಂತ್ರು ಯಾವಾಗ ಮೃತಪಟ್ಟಿದ್ದಾರೋ ನನಗೆ ಗೊತ್ತಿಲ್ಲ. ಇಂತ್ರು ರವರನ್ನು ಸಂರಕ್ಷಿತ ರೈತ ಎಂದು ಘೋಷಣೆಯಾದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. 1943 ರಿಂದ 1945 ರವರೆಗೆ ಇಂತ್ರುರವರು ರೈತ ಎಂದು ನಮೂದಾಗಿದ್ದ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ. 1945 ರ ನಂತರ ಇಂತ್ರುರವರು ರೈತ ಎಂದು ದಾಖಲಾಗಿದ್ದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನಾನಾಗಲೀ ಇಂತ್ರು ಆಗಲೀ ದಾವಾ ಸ್ವತ್ತಿಗೆ ಯಾವತ್ತೂ ಸಹಮಾಲೀಕರಲ್ಲ ಮತ್ತು ನಾವು ಯಾವತ್ತೂ ದಾವಾ ಸ್ವತ್ತುಗಳನ್ನು ಉಳುಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ದಾವಾ ಸ್ವತ್ತುಗಳ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಉಳಿದಂತೆ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವಂತೆ ಕೋರಿರುತ್ತಾರೆ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**